ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ನನಗೆ ಆಗ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದರೆ ಸಾಕು.

ಅಧ್ಯಕ್ಷರು:– ಖಂಡಿತವಾಗಿ ನಿಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ಸನ್ಮಾನ್ಯ ಅಧ್ಯಕ್ಷರೆ, ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಕೊಟ್ಟಿದ್ದೇನೆ.

ಅಧ್ಯಕ್ಷರು:– ಅದು ಇದೆ. ಈಗ ಶೂನ್ಯವೇಳೆ ಚರ್ಚೆ ಪ್ರಾರಂಭವಾಗಿದೆ. ಮಾನ್ಯ ಬೋಪಯ್ಯನವರೆ, ಹೋಟೆಲ್ ತಿಂಡಿ ದರಕ್ಕೂ ಡೀಸೆಲ್ ದರ ಕಡಿಮೆಯಾಗಿರುವುದಕ್ಕೂ ಏನು ಸಂಬಂಧ ಬರುತ್ತದೆ?

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

1. ವಿಷಯ: ಡೀಸೆಲ್ ದರ ಕಡಿಮೆಯಾಗಿರುವುದರಿಂದ ಹೋಟೇಲ್ ತಿಂಡಿ ದರ ಮತ್ತು ಬಸ ದರಗಳನ್ನು ಇಳಿಸುವ ಬಗ್ಗೆ

ಶ್ರೀ ಕೆ.ಜಿ. ಬೋಪಯ್ಯ (ವಿರಾಜಪೇಟೆ):– ಮಾನ್ಯ ಅಧ್ಯಕ್ಷರೆ, ಡೀಸೆಲ್ ದರ ಕಡಿಮೆಯಾಗಿದೆ. ಆದ್ದರಿಂದ ಹೋಟೆಲ್ ತಿಂಡಿದರ ಮತ್ತು Bus fare ಎಲ್ಲವನ್ನು ಕಡಿಮೆ ಮಾಡಿ ಎಂದು ಸರ್ಕಾರಕ್ಕೆ ಕೇಳುತ್ತಿದ್ದೇನೆ.

ಅಧ್ಯಕ್ಷರು:– ಇದಕ್ಕೆ ಯಾರು ಉತ್ತರ ಹೇಳಬೇಕು?

ಶ್ರೀ ಸಿ.ಟಿ. ರವಿ:– ಡೀಸೆಲ್, ಪೇಟ್ರೋಲ್ ದರ ಎರುತ್ತಿದ್ದ ಹಾಗೆ ಎಲ್ಲಾ ದರವೂ ಸಹ ಏರುತ್ತದೆ. ಆದರೆ, ಅವುಗಳ ದರ ಇಳಿಯುತ್ತಿದ್ದ ಹಾಗೆ ಬೇರೆಯದರ ದರ ಏತಕ್ಕಾಗಿ ಇಳಿಯಬಾರದು?

ಶ್ರೀ ಡಿ.ಎನ್. ಜೀವರಾಜ್:– ನಾನು ಮತ್ತು ಬೋಪಯ್ಯನವರು ಇಬ್ಬರೂ ಸಹ ಸೇರಿ ಕೊಟ್ಟಿದ್ದೇವೆ.

ಅಧ್ಯಕ್ಷರು:– ದಯವಿಟ್ಟು ಈ ಬಗ್ಗೆ No ಚರ್ಚೆ. ಈ ಬಗ್ಗೆ ಯಾರಾದರೂ ಉತ್ತರ ಹೇಳಿ. ಪೆಟ್ರೋಲ್ ಮತ್ತು ಡೀಸೆಲ್ ದರ ಇಳಿಕೆಯಾಗಿದೆ, ಹೋಟೆಲ್ ತಿಂಡಿಯ ಬೆಲೆ ಕಡಿಮೆಯಾಗಿಲ್ಲ ಎಂದು ಕೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):– ಮಾನ್ಯ ಬೋಪಯ್ಯನವರೆ, ಕೇಂದ್ರ ಸರ್ಕಾರವು International Marketನಲ್ಲಿ petrol ದರ ಬ್ಯಾರೆಲ್‌ಗೆ ಎಷ್ಟು ಕಡಿಮೆಯಾಗಿದೋ ಅಷ್ಟನ್ನು ಇಳಿಸಲಿಲ್ಲ. Crude oil ಬ್ಯಾರೆಲ್‌ಗೆ 115 ಡಾಲರ್‌ನಿಂದ ಈಗ 40–45 ಡಾಲರ್‌ಗೆ ಇಳಿದಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಈಗ ಕೇಂದ್ರ ಸರ್ಕಾರದವರು ಏನು ದರ ಇಳಿಸಿದ್ದಾರಲ್ಲ, ಅಷ್ಟನ್ನಾದರೂ ಇಳಿಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನಾನು ಏನು ಹೇಳುತ್ತೇನೆ ತಾವು ಕೇಳಿ. ನಿಮ್ಮ ಸರ್ಕಾರವು ಕೇಂದ್ರದಲ್ಲಿದೆ ನೀವು ಈ ಬಗ್ಗೆ ಅವರಿಗೆ ಹೇಳಲಿ ಎಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:– ಡೀಸಲ್ ದರ ಇಳಿದಿದೆಯಲ್ಲಾ, ಅದಕ್ಕೆ ತಾವು ಏನು ಮಾಡುತ್ತೀರಿ? ಎಂದು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ಸಿ.ಟಿ. ರವಿ:– KSRTC, BMTC ಯಲ್ಲಿ ಏಕೆ ಇನ್ನೂ ದರವನ್ನು ಇಳಿಸಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನಾನು ಈ ಮಾತನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, 4–5 ಸಾರಿ ದರ ಕಡಿಮೆಯಾಗಿದೆ. ಕೇಂದ್ರ ಸರ್ಕಾರದವರು 4 ಸಾರಿ excise dutyಯನ್ನು ಹಾಕಿದ್ದಾರೆ.

ಅಧ್ಯಕ್ಷರು:– ಅದು ಈಗ ಬೇಡ.

ಶ್ರೀ ಸಿದ್ದರಾಮಯ್ಯ:– ನೀವು ಬೇಡ ಎಂದು ಹೇಳುತ್ತಿದ್ದೀರಿ, ಅದು ಅವರಿಗೆ ಗೊತ್ತಾಗಬೇಕಲ್ಲವೇ?

ಅಧ್ಯಕ್ಷರು:– ತಿಂಡಿ ದರ ಏತಕ್ಕಾಗಿ ಇಳಿದಿಲ್ಲ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಸಿ.ಟಿ. ರವಿ:– ಈಗ ಪೆಟ್ರೋಲ್ ದರವು ರೂ. 25/– ಕಡಿಮೆಯಾಗಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಡಿಮೆಯಾಗಿದೆಯಲ್ಲಾ, ನಿಮ್ಮವರು parliamentನಲ್ಲಿ ಕೇಳಲಿ.

ಶ್ರೀ ಸಿದ್ದರಾಮಯ್ಯ:– ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಡಿಮೆಯಾದ ಮೇಲೆ ಅದನ್ನು ಕಡಿಮೆ ಮಾಡಬೇಕೋ ಬೇಡವೋ?

ಶ್ರೀ ಜಗದೀಶ್ ಶೆಟ್ಟರ್:– ನಿನ್ನೆಯಷ್ಟೆ ಕಡಿಮೆಯಾಗಿದೆಯಲ್ಲಾ?

(ಗೊಂದಲ)

ಶ್ರೀ ಸಿದ್ದರಾಮಯ್ಯ:– ದರವನ್ನು ಇಳಿಸಿರುವುದು ಅಲ್ಲಿ.

ಅಧ್ಯಕ್ಷರು:– ದಯವಿಟ್ಟು ಆ ಬಗ್ಗೆ ಚರ್ಚೆ ಬೇಡ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಬೋಪಯ್ಯನವರೆ, ನಾನು ಟೀಕೆ ಮಾಡುವುದಕ್ಕಾಗಿ ಹೇಳುತ್ತಿಲ್ಲ. ನಾನು facts ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಕೆ.ಜಿ. ಬೋಪಯ್ಯ:– ಈಗ ಕಡಿಮೆಯಾಗಿರುವುದಕ್ಕೆ ನೀವು ಏನು ಮಾಡುವಿರಿ? ಎಂದು ಬಗ್ಗೆ ಉತ್ತರವನ್ನು ಹೇಳಬಿಡಿ. . .

(ಗೊಂದಲ)

ಶ್ರೀ ಸಿ.ಟಿ. ರವಿ:– ಕೇಂದ್ರ ಸರ್ಕಾರದಲ್ಲಿ ಪೆಟ್ರೋಲ್ ದರವು ರೂ. 25/– ಕಡಿಮೆಯಾಗಿದೆ, ನೀವು ಎಷ್ಟು ಕಡಿಮೆ ಮಾಡುತ್ತೀರೆಂದು ಹೇಳಿ?

ಶ್ರೀ ಸಿದ್ದರಾಮಯ್ಯ:– ನಾವು ಬಸ್ ದರವನ್ನು ಇಳಿಸಿದ್ದೇವೆ. ಮಾನ್ಯ ಸದಸ್ಯರು ಹೋಟೆಲ್ ದರವನ್ನು ಇಳಿಸಬೇಕೆಂದು ಕೇಳಿದ್ದಾರೆ. ಅದರ ಬಗ್ಗೆ ಸಂಬಂಧಪಟ್ಟವರನ್ನು ಕರೆದು ಮಾತನಾಡುತ್ತೇನೆ.

(ಗೊಂದಲ)

ಅಧ್ಯಕ್ಷರು:– O.K. ಮಾನ್ಯ ಹೆಚ್.ಕೆ. ಕುಮಾರಸ್ವಾಮಿಯವರೆ ತಾವು ಮಾತನಾಡಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು):– ಹೋಟೆಲ್ ಉದ್ಯಮದವರು ನಿಮಗೆ ಬೇಕಾದವರು. ಎಲ್ಲ ನಿಮ್ಮ ಸ್ನೇಹಿತರು. Cement ಬೆಲೆ ಏನಾಗಿದೆ ಅಂತ ಗೊತ್ತಿದೆಯಾ?

(ಗೊಂದಲ)

ಶ್ರೀ ಸಿ.ಟಿ. ರವಿ:– ತಮಿಳುನಾಡಿನವರು 'ಅಮ್ಮಾ ಸಿಮೆಂಟ್' ಅನ್ನು ಕೊಟ್ಟಿದ್ದಾರೆ. ನೀವು 'ಅಪ್ಪಾ cement' ಅಥವಾ 'ಅಯ್ಯಾ ಸಿಮೆಂಟ್' ಎಂದು ಕೊಡಿ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು):– ನೀವು ಅಲ್ಲಿಗೆ ಹೋಗಿ ಮಾತನಾಡಿ. ಸಿಮೆಂಟ್ ಬೆಲೆ ಏನಾಗಿದೆ ಎಂದು ನಿಮಗೆ ಗೊತ್ತಿದೆಯೇ?

(ಗೊಂದಲ)

ಅಧ್ಯಕ್ಷರು:– ಮಾನ್ಯ ಶಿವಕುಮಾರ್‌ರವರೆ, ಅದು ಬೇಡ.

ಶ್ರೀ ಡಿ.ಕೆ. ಶಿವಕುಮಾರ್:– ಸಿಮೆಂಟ್ ಬೆಲೆ 200.00 ರೂಪಾಯಿಗಳು ಇದ್ದದ್ದು ಈ 400.00 ರೂಪಾಯಿಗಳಾಗಿದೆ.

(ಗೊಂದಲ)

ಅಧ್ಯಕ್ಷರು:– ಮಾನ್ಯ ಕುಮಾರಸ್ವಾಮಿಯವರೆ ತಾವು ಮಾತನಾಡಿ.

2. ವಿಷಯ: ಮೊರಾರ್ಜಿ ದೇಸಾಯಿ ವಸತಿ ಶಾಲಾ ಕಟ್ಟಡದ ಕೆಲಸ ನಿಂತುಹೋಗಿರುವ ಬಗ್ಗೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ):– ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಆಲೂರು ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಮೊರಾರ್ಜಿ ವಸತಿ ಶಾಲೆ ಇದೆ. ಸದರಿ ಶಾಲೆಯ ಕಟ್ಟಡದ ಕೆಲಸ 5 ವರ್ಷಗಳ ಹಿಂದೆ ಪ್ರಾರಂಭವಾಗಿತ್ತು, ಆದರೆ ಕಳೆದ ಮೂರು ವರ್ಷಗಳಿಂದ ಕಟ್ಟಡದ ಕೆಲಸ ನಿಂತು ಹೋಗಿದೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಮಾನ್ಯ ಸಹಕಾರ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮಾಹಿತಿಗಾಗಿ ಬರೆದಿದ್ದೇವೆ. ಮಾಹಿತಿ ಬಂದ ನಂತರ ಉತ್ತರ ಕೊಡಿಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಇದು ಪರಿಶೀಲನೆ ಅಲ್ಲ ಸಾರ್. ಅಲ್ಲಿ ಕಟ್ಟಡದ ಕೆಲಸ ನಿಂತು ಹೋಗಿ ಮೂರು ವರ್ಷಗಳಾಗಿದೆ.

ಅಧ್ಯಕ್ಷರು:– ಈ ಬಗ್ಗೆ ಬೇಗ ಹೇಳಿ.